**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 461/2022 |
| ಸಿ.ಡಬ್ಲ್ಯೂ | 2 |
| ಪಿ.ಡಬ್ಲ್ಯೂ | 2 |

| | | |
|---|---|---|
| ಹೆಸರು | :- | ಲಕ್ಕಪ್ಪ ಹುಣಶಿಕಟ್ಟಿ |
| ತಂದೆ/ಗಂಡನ ಹೆಸರು | :- | ಭೀಮಪ್ಪ |
| ವಯಸ್ಸು | :- | 75 ವರ್ಷ |
| ಉದ್ಯೋಗ | :- | ಒಕ್ಕಲುತನ |
| ವಾಸಸ್ಥಳ | :- | ಮೆಟಗುಡ್ |

ಸಾಕ್ಷಿಯನ್ನು ದಿಃ 20.06.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

**1.** ದಿಃ07.03.2022 ರಂದು ನನಗೆ ಮತ್ತು ಚಾಸಾ-3 ರವರಿಗೆ ಪಂಚರಾಗಿ ಸಹಕರಿಸಲು ಪೊಲೀಸರು ಚಾಸಾ-1 ರವರ ಮನೆಯ ಬಳಿ ಅವರ ಮನೆಯಲ್ಲಿ ಕಳ್ಳತನ ಆಗಿದ್ದಕ್ಕೆ ಸಂಬಂಧಿಸಿದಂತೆ ಕರೆದಿದ್ದರು. ಅದರಂತೆ ನಾನು ಹೋಗಿದ್ದು, ಸದರಿ ಮನೆಯನ್ನು ಚಾಸಾ-1 ರವರು ತೋರಿಸಿದ್ದು, ಅದರಂತೆ ಮನೆಯಲ್ಲಿ ಕಳ್ಳತನ ಆಗಿದೆ ಎಂದು ತಿಳಿಸಿದರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ, ಸದರಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 2 ಛಾಯಾಚಿತ್ರ ತೋರಿಸುತ್ತಿದ್ದು ಅವುಗಳಲ್ಲಿ ತಾನು ಇದ್ದೇನೆ ಎಂದು ಹೇಳುತ್ತಾರೆ. ಸದರಿ ಛಾಯಾಚಿತ್ರಗಳೊಂದಿಗೆ ಕಲಂ.65(ಬಿ) ಅಡಿ ಪ್ರಮಾಣ ಪತ್ರ ಲಗತ್ತಿಸದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಶಾನೆ ಎಂದು ಗುರುತಿಸಲು ಆಗುವುದಿಲ್ಲ. ಸದರಿ ಛಾಯಾಚಿತ್ರಗಳನ್ನು ಮನೆಯ ಒಳಗಡೆ ಮತ್ತು ಹೊರಗಡೆ ತೆಗೆದಿರುತ್ತಾರೆ.

**ಪಾಟೀ ಸವಾಲು ಆರೋಪಿ-1 ಪರ : ಶ್ರೀ.ಎಸ್.ಎಸ್.ಡಿ ವಕೀಲರಿಂದ ಶ್ರೀ.ಪಿ.ಎಮ್.ವಿ ವಕೀಲರ ಪರವಾಗಿ**

1. ಪಂಚನಾಮೆ ಯಾವ ರೀತಿ ಬರೆಯಬೇಕು ಎಂದು ನೀವು ಮಾಹಿತಿ ನೀಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಸ್ವಂತ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಓದಿ ಹೇಳಿದ್ದಾರೆ ಎಂದು ಹೇಳುತ್ತಾರೆ. ಏನು ಓದಿ ಹೇಳಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ವಯಸ್ಸಾದ ಕಾರಣ ನೆನಪಿಲ್ಲ ಎಂದು ಹೇಳುತ್ತಾರೆ. ಪಂಚನಾಮೆಗೆ ಸಹಿ ಪೊಲೀಸ ಠಾಣೆಯಲ್ಲಿ ತೆಗೆದುಕೊಂಡಿದ್ದಾರೆ

ಎಂದರೆ ಚಾಸಾ-1 ರವರ ಬಳಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಪೊಲೀಸರು ಹೇಳಿಕೊಟ್ಟಂತೆ ನೀವು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಪೊಲೀಸರು ಓದಿ ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಹೇಳುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟ ನಿಮಗೆ ಯಾವುದೇ ಸ್ವತಃ ಮಾಹಿತಿ ಇಲ್ಲ ಎಂದರೆ ಸರಿ. ನಿಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಪಂಚನಾಮೆ ಆಗದಿದ್ದರೂ ಸಹ ಚಾಸಾ-1 ರವರು ನಿಮ್ಮ ಪರಿಚಯಸ್ಥರಾದ ಕಾರಣ ಪೊಲೀಸರು ಹೇಳಿದಂತೆ ಚಾಸಾ-1 ರವರಿಗೆ ಸಹಾಯ ಆಗಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ಬರೆದಿಟ್ಟ ಪಂಚನಾಮೆಗೆ ನೀವು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ